5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ
(ಪೀಠಾಸೀನ, ಸಾಗರ)

ಎಸ್.ಸಿ. ಸಂ:10011/2021

ಪಿಡಬ್ಲ್ಯೂ- 12
ಸಿಡಬ್ಲ್ಯೂ- 20

| | | |
|---|---|---|
| ಸಾಕ್ಷಿ ಹೆಸರು | - | ಟಿ ಡಿ ಸಾಗರ್ಕರ್ |
| ತಂದೆ ಹೆಸರು | - | ಕೆ ದುರ್ಗಪ್ಪ |
| ವಯಸ್ಸು | - | 58 ವರ್ಷ |
| ಉದ್ಯೋಗ | - | ಪಿ ಎಸ್ ಐ ಸಾಗರ ಪೇಟೆ ಪೋಲೀಸ್ ಠಾಣೆ |
| ವಿಳಾಸ: | - | ಸಾಗರ |

ಪ್ರಮಾಣ ವಚನ ಭೋದಿಸಿದ ದಿನಾಂಕ: 30-06-2023

ಮುಖ್ಯ ವಿಚಾರಣೆ: ಮಾನ್ಯ ಸರಕಾರಿ ಅಭಿಯೋಜಕರವರಿಂದ:

ನಾನು 2014 ರಿಂದ 2019 ರ ವರೆಗೆ ಸಾಗರ ಪೇಟೆ ಪೋಲೀಸ್ ಠಾಣೆಯಲ್ಲಿ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿರುತ್ತೇನೆ.

ದಿ:13-03-2016 ರಂದು ಠಾಣೆಯಲ್ಲಿದ್ದಾಗ ಸಂಜೆ 4-30 ಗಂಟೆಗೆ ಸಾಗರ ಸರ್ಕಾರಿ ಆಸ್ಪತ್ರೆಯಿಂದ ಬಂದಂತಹ ಎಂ ಎಲ್ ಸಿ ಯನ್ನು ಪಡೆದುಕೊಂಡು ಸಾಗರ ಸರ್ಕಾರಿ ಆಸ್ಪತ್ರೆಗೆ ಹೋಗಿ ಗಾಯಾಳು ಪ್ರಾ ಸಾ -1 ರವರ ಹೇಳಿಕೆಯನ್ನು ಪಡೆದು ಸಂಜೆ 5-30 ಗಂಟೆಗೆ ಠಾಣೆಗೆ ಬಂದು ಠಾಣಾ ಗುನ್ನ ನಂ: 150/2016 ರಲ್ಲಿ ಪ್ರಕರಣ ದಾಖಲು ಮಾಡಿ ಪ್ರ ವ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಪ್ರಾ ಸಾ -1 ರವರು ನೀಡಿದ ಹೇಳಿಕೆ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ -1 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ -1(ಬಿ) ಎಂದು ಗುರುತಿಸಲಾಯಿತು. ಪ್ರ ವ ವರದಿಯನು ನಿ ಪಿ -13 ವ್ಹಾದು ಸಾಕ್ಷಿಯ ಸಹಿಯನ್ನು ನಿಪಿ -13(ಎ) ಎಂದು ಗುರುತಿಸಲಾಯಿತು. ಅದೇ ದಿನ ಸದರಿ

ಆರೋಪಿಗಳನ್ನು ದಸ್ತಗಿರಿ ಮಾಡಿ ದಸ್ತಗಿರಿ ಕ್ರಮ ಅನುಸರಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆರೋಪಿಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ದಿನಾಂಕಃ 16-03-2016 ರಂದು 1 ನೇ ಆರೋಪಿಯನ್ನು ನ್ಯಾಯಾಲಯದ ಅನುಮತಿ ಮೇರೆಗೆ ಪೋಲೀಸ್ ವಶಕ್ಕೆ ಪಡೆದು ಆತನ ಸ್ವ ಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಸದರಿ ಸ್ವ ಇಚ್ಛಾ ಹೇಳಿಕೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ - 14 ಎಂದು , ಸಾಕ್ಷಿಯ ಸಹಿಯನ್ನು ನಿಪಿ - 14(ಎ) ಎಂದು ಗುರುತಿಸಲಾಯಿತು. ನಂತರ ಪ್ರಾ ಸಾ -5 ರಿಂದ ಪ್ರಾ ಸಾ -7 ರವರನ್ನು ಪಂಚರಾಗಿ ಸ್ಥಳಕ್ಕೆ ಬರಮಾಡಿಕೊಂಡು ಪ್ರಾ ಸಾ -5 ರವರು ತೋರಿಸಿದ ಸ್ಥಳದಲ್ಲಿ ಅಮಾನತ್ತು ಪಂಚನಾಮೆಯನ್ನು ಜರುಗಿಸಿ ಆ ಸಮಯದಲ್ಲಿ 1 ನೇ ಆರೋಪಿ ಒಂದು ಗನ್ ನ್ನು ಹಾಜರುಪಡಿಸಿದ್ದು ಸದರಿ ಗನ್ ನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ಗನ್ ನ್ನು 1 ನೇ ಆರೋಪಿಯ ಹೆಂಡತಿ 2 ನೇ ಆರೋಪಿ ಬಳಸಿದ್ದಾರೆ ಎಂದುತಿಳಿಸಿ ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಸದರಿ ಗನ್ ನ್ನು ಪರಿಶೀಲನೆ ಮಾಡಿ ನೋಡಿದಾಗ 116 ಸೆಂ ಮೀ ಉದ್ದ ಇರುವ ಕಪ್ಪು ಬಣ್ಣದ ಬೆಲ್ಟ್ ಇದ್ದು ಅಲ್ಯುಮಿನಿಯಂನ ಹಿಡಿ ಇರುತ್ತದೆ. ಮರದ ಉದ್ದ 44 ಸೆಂ ಮೀ ಇದ್ದು 84 ಸೆಂ ಮೀ ಕಬ್ಬಿಣದ ನಳಿಕೆ ಇದ್ದು ಮರದ ಮೇಲೆ ಕಮಾಂಡೋ ಎಂದು ಎರಡೂ ಕಡೆ ಬರವಣಿಗೆ ಇರುತ್ತದೆ. ಬೆಲ್ಟ್ ಗೆ ಎರಡೂ ಕಡೆ ಸ್ಟೀಲ್ ನ ರಿಂಗ್ ಇರುತ್ತದೆ, ಬ್ಯಾರಲ್ ಮೇಲೆ ಕಮಾಂಡೋ 2000 ಎಂದು ಬರೆದಿರುತ್ತದೆ. ಬಂದೂಕವನ್ನು ಉಪಯೋಗಿಸಲು ಗಂಡುಗಳನ್ನು ಹಾಜರುಪಡಿಸಿದ್ದು ಒಟ್ಟು 75 ಗುಂಡುಗಳು ಇದ್ದು ಸಣ್ಣನೆ ಕಡ್ಲೆ ಕಾಳಿನ ಗಾತ್ರದ ಗುಂಡಾಗಿದ್ದು ಒಂದು ಕಡೆ ಮೊನಚಾಗಿದ್ದು ಒಂದು ಕಡೆ ರಂಧ್ರ ಇರುತ್ತದೆ.

ಇದರಲ್ಲಿ 5 ಗುಂಡುಗಳನ್ನು ಮತ್ತು ಬಂದೂಕನ್ನು ಪಂಚರಾದ ಪ್ರಾ ಸಾ -5 ರಿಂದ ಪ್ರಾ ಸಾ 7 ರವರ ಸಮಕ್ಷಮ ಅಮಾನತ್ತುಪಡಿಸಿಕೊಂಡು ಅಮಾನತ್ತುಪಂಚನಾಮೆ ಹಾಗೂ ಸ್ಥಳ ಪಂಚನಾಮೆಯನ್ನು ಮದ್ಯಾಹ್ನ 1 ರಿಂದ 5 ಗಂಟೆವರೆಗೆ ತಯಾರು ಮಾಡಿರುತ್ತೇನ. ಸದರಿ ಸ್ಥಳ ಪಂಚನಾಮೆ ಮತ್ತು ಅಮಾನತ್ತುಪಂಚನಾಮೆಯನ್ನು ಈಗಾಗಲೇ ನಿಪಿ -5 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ -5(ಡಿ) ಎಂದು ಗುರುತಿಸಲಾಯಿತು. ಆ

ಸಮಯದಲ್ಲಿ ಒಂದು ಕಚ್ಚಾ ನಕಾಶೆಯನ್ನು ಬರೆದಿದ್ದು ಅದನ್ನು ಈಗಾಗಲೇ ನಿಪಿ -7 ಎಂದು ಗುರುತಿಸಲಾಗಿದೆ, ಸಾಕ್ಷಿಯ ಸಹಿಯನ್ನು ನಿಪಿ -7(ಡಿ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಒಂದು ಫೋಟೋವನ್ನು ತೆಗೆದಿದ್ದು ಸದರಿ ಫೋಟೋವನ್ನು ಈಗಾಗಲೇ ನಿಪಿ -8 ಎಂದು ಗುರುತಿಸಲಾಗಿದೆ. ಆ ಸಮಯದಲ್ಲಿ ಪಂಚನಾಮೆ ಸಮಯದಲ್ಲಿ ಪ್ರಾ ಸಾ 5 ರಿಂದ 7 ರವರಿಗೆ ನೋಟೀಸ್ ಜಾರಿ ಮಾಡಿದ್ದು ಸದರಿ ನೋಟೀಸ್ ನ್ನು ನಿಪಿ -6 ಎಂದು ಗುರುತಿಸಲಾಗಿದೆ, ಸಾಕ್ಷಿಯ ಸಹಿಯನ್ನು ನಿಪಿ -6(ಡಿ) ಎಂದು ಗುರುತಿಸಲಾಯಿತು. ಅಮಾನತ್ತುಪಡಿಸಿಕೊಂಡ ವಸ್ತುಗಳ ಬಗ್ಗೆ ಠಾಣೆಗೆ ಬಂದು ಠಾಣಾ ಗುನ್ನ ನಂಃ 66/2016 ಕ್ಕೆ ಅಳವಡಿಸಿರುತ್ತೇನೆ.

ಅದೇ ದಿನ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾ ಸಾ -5 , ಪ್ರಾ ಸಾ - 7 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಪ್ರಾ ಸಾ 5 ರವರು ನಿಪಿ -9 ರಂತೆ ನನ್ನ ಸಮಕ್ಷಮ ಹೇಳಿಕೆ ಕೊಟ್ಟಿರುತ್ತಾರೆ. ಅದೇ ದಿನ 1 ನೇ ಆರೋಪಿಯನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ.

ದಿಃ17-03-2016 ರಂದು ಸಾಕ್ಷಿದಾರರಾದ ಪ್ರಾ ಸಾ -10, ಚಾಸಾ -16 ಮತ್ತು ಚಾಸಾ- 17 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ14-05-2016 ರಂದು ಮಾನ್ಯ ತಾಲ್ಲೂಕು ಕಛೇರಿಯಿಂದ ಬಂದಂತಹ ಸದರಿ 1 ನೇ ಆರೋಪಿಗೆ ಯಾವುದೇ ಬಂದೂಕು ಪರವಾನಿಗೆ ಇಲ್ಲವೆಂದು ಮಾಹಿತಿ ನೀಡಿರುತ್ತಾರೆ. ಸದರಿ ಮಾಹಿತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ -15 ಎಂದು ಸಾಕ್ಷಿಯ ಸಹಿಯನ್ನು ನಿಪಿ -15(ಎ) ಎಂದು ಗುರುತಿಸಲಾಯಿತು.

ದಿನಾಂಕಃ 25-05-2016 ರಂದು ಡಿ ಸಿ ಕಛೇರಿಯಿಂದ ಬಂದ ವರದಿಯನ್ನು ನೋಡಲಾಗಿ 1 ಮತ್ತು 2 ನೇ ಆರೋಪಿತರು ಯಾವುದೇ ಬಂದೂಕು ಪರವಾನಿಗೆ ಪಡೆದಿಲ್ಲ ಎಂಬ ಬಗ್ಗೆ ಮಾಹಿತಿಯನ್ನು ಸ್ವೀಕರಿಸಿರುತ್ತೇನೆ. ಸದರಿ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ -16 ಎಂದು ಸಾಕ್ಷಿಯ ಸಹಿಯನ್ನು ನಿಪಿ -16(ಎ) ಎಂದು ಗುರುತಿಸಲಾಯಿತು.

ದಿನಾಂಕಃ 01-06-2016 ರಂದು ಪಿರ್ಯಾದುದಾರರ ಗಾಯದ ಪ್ರಮಾಣಪತ್ರವನ್ನು ಪಡೆದುಕೊಂಡಿರುತ್ತೇನೆ. ಗಾಯದ ಪ್ರಮಾಣಪತ್ರವನ್ನು ಈಗಾಗಲೇ ನಿಪಿ - 10 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ -10(ಬಿ) ಎಂದು ಗುರುತಿಸಲಾಯಿತು. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ-21 ಪಿ ಎಸ್ ಐ ಸುರೇಶ ರವರಿಗೆ ಹಸ್ತಾಂತರಿಸಿರುತ್ತೇನೆ.

ಅಮಾನತ್ತು ಪಂಚನಾಮೆ ಸಮಯದಲ್ಲಿ ಅಮಾನತ್ತುಪಡಿಸಿಕೊಂಡ ಬಂದೂಕನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಬಂದೂಕನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು ಮಾ -4 ಎಂದು ಗುರುತಿಸಲಾಗಿದೆ.

(ಈಗ ನ್ಯಾಯಾಲಯದ ಮುಂದೆ, ಮಹಜರ್ ಕಾಲಕ್ಕೆ ಜಪ್ತಿ ಮಾಡಿದ ಸ್ವತ್ತನ್ನು ಬಿಳಿಬಟ್ಟೆಯಿಂದ ಸುತ್ತಿ ಪ್ಯಾಕ್ ಮಾಡಿ ಸೀಲು ಹಾಕಿದ್ದನ್ನು, ಅದನ್ನು ತೆರೆದ ನ್ಯಾಯಾಲಯದಲ್ಲಿ ಸೀಲ್ ನ್ನು ಬಿಚ್ಚಿ ನೋಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು, ಅದರಂತೆ ಸದರಿ ಸ್ವತ್ತುಗಳ ಸೀಲ್ ಬಿಚ್ಚಿ ತೆರೆಯಲಾಯಿತು)

5 ರೈಫಲ್ ಪಿಲ್ಲೆಟ್ಸ್ ಗಳನ್ನು ನೋಡಿ ಗುರುತಿದ್ದು ಅದನ್ನು ಮು ಮಾ-5 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ನಿಪಿ - 1 ರಲ್ಲಿ ನಿಪಿ -1 ನ್ನು  ನನ್ನ ಸಮಕ್ಷಮ ಬರೆದಿದ್ದಾರೆ ಎಂದು ಬರೆದಿಲ್ಲ ಎಂದರೆ ಹೌದು. ಎಲ್ಲಾ ಆರೋಪಿಗಳನ್ನು ಸಂಜೆ 6-30 ಗಂಟೆಗೆ ದಸ್ತಗಿರಿ ಮಾಡಿರುತ್ತೇನೆ. ಸದರಿ ಆರೊಪಿಗಳನ್ನು ನ್ಯಾಯಾಲಯಕ್ಕೆ ಎಷ್ಟು ಗಂಟೆಗೆ ಹಾಜರುಪಡಿಸಿದ್ದೆನು ಎಂದು ನೆನಪಿಲ್ಲ. 1 ನೇ ಆರೋಪಿಯನ್ನು ನಮ್ಮ ಕಸ್ಟಡಿಗೆ ಮದ್ಯಾಹ್ನ ತೆಗೆದುಕೊಂಡಿರುತ್ತೇವೆ. ಎಫ್ ಐ ಆರ್ ಆದ ನಂತರ ನಾನು ಆರೋಪಿಗಳನ್ನು  ದಸ್ತಗಿರಿ ಮಾಡಿರುತ್ತೇನೆ ಎಂದರೆ ಹೌದು. ಮು ಮಾ - 4

ರಲ್ಲಿ ಯಾವುದೇ ಸ್ಟೀಲ್ ವಸ್ತು ಇಲ್ಲ ಎಂದರೆ ಹೌದು, ಆದರೆ ತುಕ್ಕು ಹಿಡಿದಿದೆ ಎಂದು ನುಡಿಯುತ್ತಾರೆ. ಮು ಮಾ 4 ರ ಮೇಲೆ 2000 ಎಂದು ಕಂಡು ಬರುವುದಿಲ್ಲ ಎಂದರೆ ಹೌದು. ಮು ಮಾ -4 ಏರ್ ರೈಫಲ್ ಎಂದರೆ ನನಗೆ ಗೊತ್ತಿಲ್ಲ. ಮು ಮಾ -4 ಗೆ ಆರ್ಮ್ಸ್ ಆ್ಯಕ್ಟ್ ಪ್ರಕಾರ ಪರವಾನಿಗೆ ಬೇಕಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮು ಮಾ -4 ಗಾಳಿಯಲ್ಲಿ ಚಾಲನೆ ಮಾಡುವುದು ಎಂದರೆ ನನಗೆ ಗೊತ್ತಿಲ್ಲ.

ನಿಪಿ - 5 ರಲ್ಲಿ ಸ್ಥಳ ಪಂಚನಾಮೆ ಬರೆದ ನಂತರ ಅಮಾನತ್ತುಪಂಚನಾಮೆಯನ್ನು ಸೇರಿಸಿ ಬರೆದಿದ್ದು ಬೇರೆ ಬೇರೆ ಅಕ್ಷರಗಳಲ್ಲಿ ಬರೆಯಲಾಗಿದೆ ಎಂದರೆ ಸರಿಯಲ್ಲ. ನನ್ನ ಮುಂದೆ ಚಾಸಾ-5 ಮತ್ತು ಚಾಸಾ-7 ರವರು ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಚಾಸಾ-5 ಮತ್ತು ಚಾಸಾ-7 ಪ್ರತ್ಯಕ್ಷ ಸಾಕ್ಷಿಗಳಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಹೇಳಿದಂತಹ ಹೆಚ್ ಬಿ ಈಶ್ವರಗೌಡ ಎಂಬುವವರನ್ನು ತೋರಿಸಿದ್ದು ಅವರನ್ನು ಸಾಕ್ಷಿ ಮಾಡಲು ಹಾಗೂ ಅವರ ಹೇಳಿಕೆ ಪಡೆಯಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದರೆ ಹೌದು.

ನಿಪಿ - 14 ರಂತೆ ನನ್ನ ಮುಂದೆ 1ನೇ ಆರೋಪಿ ಯಾವುದೇ ಸ್ವ ಇಚ್ಛಾ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ . ನಿಪಿ -14 ನನ್ನ ಸ್ವಂತ ಬರವಣಿಗೆಯಲ್ಲಿ ಇದೆ. ನಿಪಿ -14 ನ್ನು ಎಷ್ಟು ಗಂಟೆಗೆ ಬರೆದಿದ್ದೇನೆ ಎಂದು ಸಮಯ ನಮೂದಾಗಿಲ್ಲ ಎಂದರೆ ಹೌದು. ನಿಪಿ -14 ರಲ್ಲಿ ನನ್ನ ಸಮಕ್ಷಮ ಎಂದು ಬರೆದಿದ್ದು ನನ್ನ ಬರವಣಿಗೆಯಲ್ಲಿ ಬರೆದಿದ್ದೇನೆ ಎಂದು ಕಂಡುಬರುವುದಿಲ್ಲ ಎಂದರೆ ಹೌದು. ಕೃತ್ಯ ನಡೆದ ಸ್ಥಳದಲ್ಲಿ ನಾನು ಯಾವುದೇ ನಿಪಿ -5 ಸ್ಥಳ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಸ್ಕೆಚ್ ನ ಖಾಲಿ ಪೇಪರ್ ಮೇಲೆ ಪ್ರಾ ಸಾ -5 ರಿಂದ ಪ್ರಾ ಸಾ -7 ರವರ ಸಹಿಗಳನ್ನು ಪಡೆದಿದ್ದೇನೆ ಎಂದರೆ ಸರಿಯಲ್ಲ.

ನಾನು ನಿಜ ತನಿಖೆ ಮಾಡಿಲ್ಲ ಎಂದರೆ ಸರಿಯಲ್ಲ. ದಿನಾಂಕಃ 08-01-2020 ರಂದು ಡಿ ಸಿ ಕಛೇರಿಯಿಂದ ಮು ಮಾ -4 ಕ್ಕೆ ಪರವಾನಿಗೆ ಅವಶ್ಯಕತೆ ಇಲ್ಲ ಎಂದು ವರದಿಯನ್ನು ಕೊಟ್ಟಿದ್ದಾರೆ ಎಂದರೆ ಹೌದು. ಪ್ರತ್ಯಕ್ಷ ಸಾಕ್ಷಿಗಳ ಹೇಳಿಕೆ ಯನ್ನು ಕೇಸಿಗೆ ಅನುಗುಣವಾಗಿ ತೆಗೆದುಕೊಂಡಿದ್ದೇನೆ

ಎಂದರೆ ಸರಿಯಲ್ಲ. ಚಾಸಾ-21 ರವರು ಮುಂದಿನ ತನಿಖೆಗಾಗಿ ಕೇಸಿನ ಕಡತವನ್ನು ಯಾವ ದಿನಾಂಕದಂದು ನೀಡಿದ್ದೇನೆ ಎಂದು ದಿನಾಂಕ ನಮೂದು ಮಾಡಿಲ್ಲ ಎಂದರೆ ಹೌದು. ಆರೋಪಿತರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯ ಪ್ರಕಾರ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಣಗೊಳಿಸಲಾಯಿತು)

ಓ ಹೇ ಕೇ ಸ ಇದೆ

5 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಶಿವಮೊಗ್ಗ (ಪೀಠಾಸೀನ, ಸಾಗರ).